ವಿಜಯವಾಣಿ
ಕನ್ನಡಿಗರ ಧ್ವನಿ

# ಜೈನ್ ವಿವಿಗೆ ಭರ್ಜರಿ ಜಯ

**ಬೆಂಗಳೂರು:** ಜೈನ್ ವಿಶ್ವವಿದ್ಯಾಲಯ ತಂಡ ವಿಐಇ ಕ್ರೀಡಾಕೂಟದ ಟೇಬಲ್ ಟೆನಿಸ್, ಬಾಸ್ಕೆಟ್‌ಬಾಲ್ ಹಾಗೂ ಬ್ಯಾಡ್ಮಿಂಟನ್ ಟೂರ್ನಿಗಳಲ್ಲಿ ಜಯ ಸಾಧಿಸಿತು. ಮಂಗಳವಾರ ನಡೆದ ಪುರುಷರ ವಿಭಾಗ ಬಾಸ್ಕೆಟ್ ಬಾಲ್ ಪಂದ್ಯದಲ್ಲಿ ಜೈನ್ ವಿವಿ 'ಎ' ತಂಡ 32-30ರಿಂದ ಜೈನ್ ವಿವಿ 'ಬಿ'ತಂಡವನ್ನು ಮಣಿಸಿತು. ಪುರುಷರ ವಿಭಾಗದ ಟೇಬಲ್ ಟೆನಿಸ್‌ನಲ್ಲಿ ಜೈನ್ ವಿವಿ ತಂಡ 3-0ಯಿಂದ ಪಿಇಎಸ್ ವಿವಿ ತಂಡವನ್ನು ಮಣಿಸಿದರೆ, ಮಹಿಳಾ ವಿಭಾಗದಲ್ಲಿ ಸೇಂಟ್ ಫ್ರಾನ್ಸಿಸ್ ತಂಡವನ್ನು 3-0ಯಿಂದ ಸೋಲಿಸಿತು. ಪುರುಷರ ವಿಭಾಗದ ಬ್ಯಾಡ್ಮಿಂಟನ್‌ನಲ್ಲಿ ಜೈನ್ ವಿವಿ ತಂಡ ಜೈನ್ ವಿವಿ ತಂಡ ವಿಜೆಐಟಿ ಹಾಗೂ ಸುರಾನ ಕಾಲೇಜು ತಂಡಗಳನ್ನು ಕ್ರಮವಾಗಿ 2-0ಯಿಂದ ಸೋಲಿಸಿತು.